ಕರ್ನಾಟಕ ವಿಧಾನಸಭೆ

3434; ಶ್ರೀ ತಿಮ್ಮರಾಯಪ್ಪ ಕೆ.ಎಂ (ಪಾವಗಡ)

ಅ) ಪಾವಗಡ ತಾಲ್ಲೂಕಿಗೆ ತುಂಗಾಭದ್ರಾ ಡ್ಯಾಂನಿಂದ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಯ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆಯೇ; ಈ ಯೋಜನೆಗೆ ಬೇಕಾಗಿರುವ ಒಟ್ಟು ಅನುದಾನವೆಷ್ಟು (ವಿವರ ನೀಡುವುದು);

ಆ) ಕುಡಿಯುವ ನೀರಿನ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಈ ಬಗ್ಗೆ ಆದೇಶ ನೀಡಿದ್ದರೂ, ಉಚ್ಚ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸದೇ ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗೆ ಅನುಮೋದನೆ ನೀಡಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಪ್ರಾಂತೀಯ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಪಾವಗಡ ತಾಲ್ಲೂಕಿಗೆ ತುಂಗಾಭದ್ರಾ ಜಲಾಶಯದಿಂದ ಶಾಶ್ವತ ಕುಡಿಯುವ ನೀರು ಒದಗಿಸುವ ರೂ. 1353.69 ಕೋಟಿಗಳ ಪ್ರಾಥಮಿಕ ಯೋಜನಾ ವರದಿಗೆ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ (SLSSC) ಅನುಮೋದನೆ ನೀಡಿದೆ.

ಆ) ಮತ್ತು ಇ) ಈ ಕುರಿತಂತೆ ಪ್ರಕರಣ ಸಂಖ್ಯೆ: WP No.32420/2011ರಲ್ಲಿ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯ ಆದಷ್ಟು ಜಾಗ್ರತೆಯಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ತಿಳಿಸಿದೆ. ಈ ಪ್ರಾಂತೀಯ ಕುಡಿಯುವ ನೀರು ಸರಬರಾಜು

ಯೋಜನೆಯಲ್ಲಿ ಪಾವಗಡ, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳ ಗ್ರಾಮೀಣ ಜನವಸತಿಗಳಿಗೆ, ವಿಶೇಷವಾಗಿ ಅಧಿಕ ಫ್ಲೋರೈಡ್ ಭಾದೆಗೊಳಗಾಗಿರುವ ಪಾವಗಡ ತಾಲ್ಲೂಕಿನ ಎಲ್ಲಾ ಜನವಸತಿಗಳನ್ನು ಆವರಿಸಲು ಯೋಜನೆ ರೂಪಿಸಲಾಗಿದೆ. ಈ ಯೋಜನೆಯ ಅನುಷ್ಠಾನವನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ. ಈ ಸಲುವಾಗಿಯೇ 2015–16ರ ಆಯವ್ಯಯ ಭಾಷಣದ ಕಂಡಿಕೆ 315ರಲ್ಲಿ ಈ ಪ್ರಾಂತೀಯ ಕುಡಿಯುವ ನೀರಿನ ಯೋಜನೆ ಕೈಗೆತ್ತಿಕೊಳ್ಳಲಾಗುವುದೆಂದು ಸರ್ಕಾರದ ಬದ್ಧತೆಯನ್ನು ಈಗಾಗಲೇ ಘೋಷಿಸಲಾಗಿದೆ.

Karnataka Legislative Assembly

3434; Thimmarayappa K.M (Pavagada)

A) Whether the proposal of supplying drinking water with Tungabhadra Dam source to Pavagada Taluk has been approved; What is the amount required for this scheme (details be furnished);

B) Has it come to the notice of government that, though PIL is filed before the Hon'ble High Court and though the Hon'ble Court has passed orders, Government is not implementing the court orders and following delay tactics;

C) If so, when the approval will be accorded for drinking water schemes, and when the work will be completed (complete information be furnished)?